**10**

# ಸಹಕಾರ ಸಂಘಗಳ ಲೆಕ್ಕ ಪರಿಶೋಧನಾ ನಿರ್ದೇಶಕರ ಕಛೇರಿ

**ಬಸವನಗುಡಿ, ಬೆಂಗಳೂರು – 560 004**

ಸಂಖ್ಯೆ: ಲೆಪಶಾ/ಸಭೆ/ಬೆವಿ/58/2002–03 ದಿನಾಂಕ : 10.12.2002

## ಸುತ್ತೋಲೆ

**ವಿಷಯ: ಸೌಹಾರ್ದ ಕಾಯಿದೆಯಡಿ ನೋಂದಣಿಯಾಗಿರುವ ಸಹಕಾರ ಸಂಘಗಳ ಲೆಕ್ಕ ಪರಿಶೋಧನೆ ಕುರಿತು.**

ಈ ಹಿಂದೆ ಸಹಕಾರ ಸಂಘಗಳ ಕಾಯಿದೆ, 1959ರಡಿ ನೋಂದಣಿಯಾಗಿದ್ದು ಕೆಲವು ಸಂಸ್ಥೆಗಳು ಪ್ರಸ್ತುತ ಸೌಹಾರ್ದ ಕಾಯಿದೆಯಡಿ ನೋಂದಣಿಯಾಗಿರುವುದು ಸರಿಯಷ್ಟೇ. 2001–02ರ ಅವಧಿಗೆ ಸಂಪೂರ್ಣವಾಗಿ ಸಹಕಾರ ಕಾಯಿದೆ ಯಡಿ ಕಾರ್ಯ ನಿರ್ವಹಿಸಿರುವ ಹಾಗೂ ದಿನಾಂಕ 1.4.2002ರ ನಂತರ ಸೌಹಾರ್ದ ಕಾಯಿದೆಯಡಿ ನೋಂದಣಿಯಾಗಿರುವ ಸಹಕಾರಿ ಸಂಘಗಳ ಲೆಕ್ಕ ಪರಿಶೋಧನೆಯನ್ನು ಈ ಇಲಾಖೆಯಿಂದ ನಿರ್ವಹಿಸಬೇಕೇ? ಬೇಡವೇ? ಎಂಬ ಸ್ಪಷ್ಟೀಕರಣವನ್ನು ಕೆಲವು ಅಧಿಕಾರಿಗಳು ಕೋರಿರುತ್ತಾರೆ.

2001–02ನೇ ಸಾಲಿನಲ್ಲಿ ಇವು ಸಹಕಾರ ಸಂಘಗಳ ಕಾಯಿದೆ, 1959ರಡಿ ಕಾರ್ಯ ನಿರ್ವಹಿಸುತ್ತಿರುವ ಕಾರಣ, ಒಂದು ವೇಳೆ ನೋಂದಣಿಯಾದ ದಿನಾಂಕದಂದು ಇವುಗಳ ಲೆಕ್ಕ ಪರಿಶೋಧನೆಯನ್ನು ಈ ಇಲಾಖೆಯಿಂದ ಪ್ರಾರಂಭಿಸಿ ಪ್ರಗತಿಯಲ್ಲಿಟ್ಟಿದ್ದಲ್ಲಿ. ಅಂತಹ ಸಂಸ್ಥೆಗಳ ಲೆಕ್ಕ ಪರಿಶೋಧನೆಯನ್ನು ಮಾತ್ರ ಪೂರ್ಣಗೊಳಿಸಿ ನಿಯಮಾನುಸಾರ ವರದಿ ಬಿಡುಗಡೆಗೆ ಕ್ರಮವಿಡಬೇಕೆಂದು ಈ ಮೂಲಕ ಸ್ಪಷ್ಟಪಡಿಸಲಾಗಿದೆ.

ಸಹಿ/–

**ನಿರ್ದೇಶಕರು**